ಸಿಸಿ ನಂಃ 187/2023

ಸಿ.ಡಬ್ಲೂ 10/

ಪಿ.ಡಬ್ಲೂ6

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**

**ಧಾರವಾಡ.**

ಸಾಕ್ಷಿದಾರರ ಹೆಸರು ಃ ಬಸಲಿಂಗಪ್ಪ

ತಂದೆಯ ಹೆಸರು ಃ ಮಲ್ಲೇಶಪ್ಪ ದನಿಗೊಂಡ

ವಯಸ್ಸು ಃ 57 ವರ್ಷ

ಉದ್ಯೋಗ ಃ ಚಾಲಕ

ವಾಸ ಸ್ಥಳ ಃ ಹಿರೇಹೊನ್ನಳ್ಳಿ.

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **05.03.2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಮೂರು ವರುಷದ ಹಿಂದೆ ರಾತ್ರಿ 9.00 ರ ಸುಮಾರಿಗೆ ಚಾಸಾ9 , ಗೂಳಪ್ಪ ಮತ್ತು ಚಾಸಾ8 ರವರು ಕಡ್ಲಿ ಕೀಳಲು ಚಕ್ಕಡಿಯಲ್ಲಿ ಹೊಲಕ್ಕೆ ಹೊಗುತ್ತಿದ್ದಾಗ ಹಿಂದಿನಿಂದ ಬುಲೇರೊ ವಾಹನ ಬಂದು ಡಿಕ್ಕಿ ಪಡಿಸಿತು. ಚಾಸಾ8 ರವರು ನನಗೆ ಪೊನ ಮಾಡಿ ಅಪಘಾತವಾಗಿದೆ ಎಂದು ತಿಳಿಸಿದರು. ನಾನು ಕೂಡಲೇ ಘಟನಾ ಸ್ಥಳಕ್ಕೆ ಹೊಗಿರುತ್ತೇನೆ. ಆಗ ಗೂಳಪ್ಪ ಸ್ಥಳದಲ್ಲಿ ಮೃತ ಪಟ್ಟಿರುತ್ತಾರೆ. ಚಾಸಾ9 ರವರು ಪ್ರಜ್ಞೆ ತಪ್ಪಿದ್ದರು ಚಾಸಾ8 ರವರಿಗೆ ಗಾಯಗಳಾಗಿದ್ದವು. ಮೊದಲು ಸಿವಿಲ್ ಆಸ್ಪತ್ರೆಗೆ ಕರೆದುಕೂೕಂಡು ಹೂೕಗಿ ಅಲ್ಲಿಂದ ಎಸ ಡಿ ಎಂ ಗೆ ಹೋಗಿ ನಂತರ ಕಿಮ್ಸ ಆಸ್ಪತ್ರೆ ಗೆ ಹೊಗಿರುತ್ತೇವೆ. ಸದರಿ ಅಪಘಾತ ಬುಲೇರೊ ವಾಹನದಿಂದ ಆಗಿದೆ

ಸಿಸಿ ನಂಃ 187/2023
ಸಿ.ಡಬ್ಲೂ 10/
ಪಿ.ಡಬ್ಲೂ6

ಗೊತ್ತಾಯಿತು. ಅಪಘಾತವಾಗಿ 10 ದಿನಗಳ ನಂತರ ಸದರಿ ಬುಲೇರೊ ತೋರಿಸಿರುತ್ತಾರೆ. ಸದರಿ ಗಾಡಿ ನಂಬರ ನನಗೆ ನೆನಪಿಲ್ಲ. ಆರೋಪಿ ಯನ್ನು ನನಗೆ ತೋರಿಸಿರುವುದಿಲ್ಲ.

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ದಿಃ 28.02.2022 ರದು ಠಾಣೆಗೆ ಕರಸಿ ಬುಲೇರೊ ವಾಹನ ನಂ.ಕೆಎ 49/5874 ತೋರಿಸಿದರು ಎಂದರೆ ನನಗೆ ನೆನಪಿಲ್ಲ. ಅದೇ ರಿತಿ ಅದೇ ದಿನ ಪೋಲಿಸರು ಸದರಿ ಬುಲೇರೊ ವಾಹನದ ಚಾಲಕ ಸಲ್ಮಾನ ಖಾನ ರಫಿಕ ರವರನ್ನು ತೋರಿಸಿದರು ಎಂದರೆ ಸರಿಯಲ್ಲ. ಈ ಬಗೆಗ ನಾನು ದಿಃ 19.02.2022 ರಂದು ಹೇಳಿಕೆ ನೀಡಿದ್ದೆನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.16 ಎಂದು ಗುರುತಿಸಲಾಯಿತು. ನಿಪಿ.16 ರಂತೆ ಹೇಳಿಕೆ ನೀಡಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

1. ಅಪಘಾತ ವನ್ನು ನಾನು ಪ್ರತ್ಯಕ್ಷವಾಗಿ ನೊಡಿಲ್ಲ ಎಂದರೆ ಸರಿ.

ಸಿಸಿ ನಂಃ 187/2023
ಸಿ.ಡಬ್ಲೂ 10/
ಪಿ.ಡಬ್ಲೂ6

ಮರುವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.